15 ಟೆಂಡರ್ ನೀಡುವಾಗ ಭಾಗ –1ರಲ್ಲಿ ತಾಂತ್ರಿಕ ಬಿಡ್ಡಿನ ವಿವರಕ್ಕೆ ಮತ್ತು ಭಾಗ–2ರಲ್ಲಿ ಆರ್ಥಿಕ ಬಿಡ್ಡಿನ ವಿವರಕ್ಕೆ ದಾಖಲಾತಿ ಪ್ರತ್ಯೇಕ ಸಲ್ಲಿಸಬೇಕು. ಮೊದಲನೆಯದಾಗಿ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್ಡಿನಲ್ಲಿ ಟೆಂಡರ್ ಪ್ರಕಾರ ದಾಖಲೆಗಳನ್ನು ನೀಡದಿದ್ದಲ್ಲಿ ಮತ್ತು ಪ್ರಾತ್ಯಕ್ಷತೆ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಕಾರಂಜಿ ಪ್ರದರ್ಶನ ನೀಡಲು ಅಸಮರ್ಥರಾದಲ್ಲಿ ಅಂತಹ ಟೆಂಡರ್‌ನ್ನು ತಿರಸ್ಕರಿಸಲಾಗುವುದು. ಅರ್ಹತೆ ಇರುವ ಟೆಂಡರ್‌ಗಳನ್ನು ಅಂಗೀಕರಿಸಲಾಗುವುದು. ನಂತರ ಎರಡನೆಯದಾಗಿ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು.

16 ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಮತ್ತು ಸ್ವೀಕರಿಸುವ ಪೂರ್ಣ ಅಧಿಕಾರವನ್ನು ತೋಟಗಾರಿಕೆ ನಿರ್ದೆಶಕರು, ಲಾಲ್‌ಬಾಗ್, ಬೆಂಗಳೂರುರವರು ಹೊಂದಿರುತ್ತಾರೆ.

ಟೆಂಡರ್ ಬಗ್ಗೆ ಈ ಕಛೇರಿಯನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು.
ದೂರವಾಣಿ ಸಂಖ್ಯೆ : 22864125.

ತೋಟಗಾರಿಕೆ ಉಪ ನಿರ್ದೇಶಕರು
ಕಬ್ಬನ್ ಉದ್ಯಾನವನ, ಬೆಂಗಳೂರು.

ಪಿ.ಆರ್. 947

PUBLIC WORKS, PORTS & INLAND WATER TRANSPORT DEPARTMENT

Office of the Chief Engineer, Communication & Buildings (South) Bengaluru, PWD Buildings, K.R.Circle, Bangalore

Telephone-080-22270281 Extn-222 Fax-080-22211166

INVITATION FOR QUOTATIONS FOR SUPPLY OF GOODS /EQUIPMENT

No.CE/CBS/STR/TND-2/Water-Purifier/2009-10, Dated: 14th October 2009

Sub: Invitation of Quotation for supply of Water Purifier RO+UV Plus Essential Mineral Systems.

1. Sealed Competative Quotations are invited by the undersigned for the following items of Goods/Equipments.

Sl. No.	Description	Model	Qnty	Tank Capacity	MRP	Total
1.	RO+UV+Essential Minerals	10 Imp	01			
2.	RO+UV+Essential Minerals	05 Imp	01			
3.	RO+UV+Essential Minerals	02 Imp	01			

2. Terms and Conditions:

[a] The tenderer may quote for one or more items in the format of quotation attached;

[b] All duties, taxes and other levies payable by the tenderer (inluding Sales tax on the finished goods) shall be included in the item rate.

[c] The rates quoted for each item shall be fixed for the duration of the contract of one year and shall not be subject to any adjustment

[d] Rates for supply of partial quantity of an item is not acceptable.

[e] Corrections if any shall be made by crossing out, initialing, dating and rewriting.

[f] Cable or Facsimile quotations are not acceptable.

[g] Tender document (KQ-2) may be purchased from the office of Chief Engineer, C. & B. (South) Bengaluru from 03-11-2009 to 07-11-2009 during office hours, for a non-refundable fee of Rs.200.00 (Rupees Two Hundred only), in the form of cash/ Demand Draft / Pay Order on any Nationalized/Scheduled bank payable at Bengaluru in favour of Executive Engineer, PWP & IWTD, Bangalore Division, Bangalore OR by cash @ Central Office Interested tenderers may obtain further information at the same address.

[h] EMD of Rs.5000/- Five Thousand in the form of DD/NSC/FDR pledged in favour of EE.PWP & IWT Department Bengaluru Division Bengaluru

3. Each tenderer must submit only one quotation.

4. Validity of quotations:

The quotations shall remain valid for a period of not less than 30 days after the deadline fixed for submission of quotations:

5. Evaluation of quotations:

The Purchaser will evaluate and compare the quotations determined to be substantially responsive i.e., which are properly signed, and confirm to the terms and conditions and specifications in the following manner:

[a] The evaluation will be done including the sales tax. If the tenderer has not included the Sales tax in his quotation for the item rate, and has also not indicated the rate of Sales tax applicable, the quoted rate will be treated as though it is inclusive of the sales tax and no extra payment for Sales tax will be made;

[b] The evaluation would be done for each item separately. The tenderer who has quoted partial quantity of an item would be treated as non-responsive. Purchaser will award the contract for each item separately to the lowest responsive tenderer for that item.

6. Award of contract.

[a] The Purchaser will award the contract to the tenderer whose quotation has been determined to be substantially responsive and who has offered the lowest price as per 5(b) above.

[b] The Purchaser reserve the right at the time of contract award to increase or decrease the quantities of the items indicated in para 1 without any change in the unit price or any other terms and conditions, within a period of ONE YEAR from the date of agreement.

[c] The Purchaser prior to the expiration of the quotation validity period will notify the tenderer whose quotation is accepted of the award of contract. The terms of accepted offer shall be incorporated in the Purchase order.

[d] Normal commercial warranty / guarantee shall be applicable to the supplied goods;

[e] Payments shall be made immediately after the delivery of the goods and their acceptance, subject to the availability of funds.

[f] Notwithstanding the above, the Purchaser reserves the right to accept or reject any quotations and to cancel the quotation process and reject all quotations at any time prior to the award of the contract.

[g] Validity shall be ONE YEAR from the date of an agreement or until further orders.

7. Last date and time of receipt of quotation:

[a] You are requested to submit the sealed quotations superscribed on the envelope as "Quotations for the supply of Stationeries Due on 11.11.2009" latest by 16.00 hours on 11.11.2009.

We look forward to receiving your quotations.

For Chief Engineer
Communication & Buildings (South) Bengaluru

FORMAT OF QUOTATION

Sl. No.	Description of goods/equipment	Brief specifications	Quality	Unit	Unit rate (Rs) in words	Total amount (in Figures and works)
1	2	3	4	5	6	7

1. We agree to supply the above goods in accordance with the technical specifications for the total price shown against the item(s) for which quotations have been submitted, within the period specified in the invitation for Quotations.

2. We also confirm that the normal commercial warranty/guarantee of.........months shall apply to the offered goods.

(Tender)
Name:
Signature:
Date:

P.R. 920

ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ರಾಜ್ಯ ಗುಪ್ತವಾರ್ತೆರವರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–560001

ಇ–ಖರೀದಿ ನೋಟೀಸ್

ಸಂಖ್ಯೆ.ರಾಗುವಾ/04(1)ಸಂಗ್ರಹ/ಆಧುನೀ/2009–10, ದಿನಾಂಕ: 23ನೇ ಅಕ್ಟೋಬರ್ 2009

ಪೊಲೀಸ್ ಇಲಾಖೆಯ ರಾಜ್ಯ ಗುಪ್ತವಾರ್ತೆ ಘಟಕವು ಇನ್ನು ಮುಂದೆ ರೂ.10 ಲಕ್ಷ ಮತ್ತು ಇದಕ್ಕಿಂತ ಹೆಚ್ಚಿನ ಮೌಲ್ಯದ ಎಲ್ಲಾ ಭದ್ರತಾ ಉಪಕರಣಗಳ ಖರೀದಿಯನ್ನು ಕೆ.ಟಿ.ಪಿ.ಪಿ. (ತಿದ್ದುಪಡಿ) ಕಾಯ್ದೆ–2007 ರ ಸೆಕ್ಷನ್ 18 'ಎ' ರ ಅನ್ವಯ ಇ–ಖರೀದಿ ಮೂಲಕ ಖರೀದಿಸಲು ನಿರ್ಧರಿಸಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್‌ನ ಸಂಕ್ಷಿಪ್ತ ವಿವರ	ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ
1	POLICE/2009-10/IND 4	ಭದ್ರತೆಗೆ ಸಂಬಂಧಿಸಿದಂತೆ ಲಿಕ್ವಿಡ್ ಎಕ್ಸ್‌ಪ್ಲೋಸಿವ್ ಡಿಟೆಕ್ಟರ್ ಉಪಕರಣದ ಖರೀದಿ ಸಂಖ್ಯೆ.ರಾಗುವಾ/04(1)ಸಂಗ್ರಹ/ಆಧುನೀ/2009–10	23.11.2009

ಭದ್ರತಾ ಉಪಕರಣವನ್ನು ಸರಬರಾಜು ಮಾಡಲು ಇಚ್ಛಿಸುವವರು ಇ–ಖರೀದಿ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳಬೇಕು. ಇ–ಖರೀದಿಯ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಇ–ಖರೀದಿ ಪ್ರೊಕ್ಯೂರ್‌ಮೆಂಟ್ ಸೆಲ್‌ನಲ್ಲಿ ವ್ಯವಸ್ಥೆಗೊಳಿಸುತ್ತಿದ್ದು, ಎಲ್ಲಾ ಸರಬರಾಜುದಾರರು ದೂರವಾಣಿ ಸಂಖ್ಯೆ: 080–22485867, 22485927 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ–ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ–ಖರೀದಿ ಪ್ಲಾಟ್ ಫಾರಂನಲ್ಲಿ ನೊಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಹೆಚ್ಚಿನ ವಿವರಗಳಿಗೆ https://eproc.karnataka.gov.in ಅಥವಾ ಹೆಲ್ಪ್‌ಲೈನ್ 080–22485867, 22485927 ಗೆ ಸಂಪರ್ಕಿಸತಕ್ಕದ್ದು.

ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರ ಪರವಾಗಿ,
ರಾಜ್ಯ ಗುಪ್ತವಾರ್ತೆ, ಬೆಂಗಳೂರು.

OFFICE OF THE INSPECTOR GENERAL OF POLICE, STATE INTELLIGENCE,

No.2, Nrupathunga Road, Bangalore – 01

E-PROCUREMENT NOTICE

No. State Int/ 04(1)/STS/MDR/2009-10, Dated: 23rd October 2009

Police Department (State Intelligence) has initiated e-Procurement system for all procurements valued rupees 10 lakhs and above as per section 18A of KTPP (Amendment) Act 2007.

Sl. No.	Tender No.	Description of Tender	Last Date for Bid submission
1	POLICE/2009-10/IND 4	Procurement of Liquid Explosive Detector	23.11.2009

In order to participate an e-Procurement platform all the intended suppliers have to register in the e-Procurement portal. A training programme in e-Procurement is organized by e-Procurement cell. All the suppliers can take assistance with e-Procurement help desk at 080-22485867, 22485927. In order to participate in the e-Procurement tender, it is mandatory for suppliers to register in e-Procurement platform.

Please visit https://eproc.karnataka.gov.in for more information or call helpline 080-22485867, 22485927.

for Inspector General of Police,
State Intelligence, Bangalore.

P.R. 921

ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, (ರಾಘವೇಂದ್ರ ಕಾಲೋನಿ)

ಮಧುಗಿರಿ, ಇವರ ಹಳೆಯ ವಾಹನ ಬಹಿರಂಗ ಹರಾಜು

ಜಿಲ್ಲಾಧಿಕಾರಿಗಳು, ತುಮಕೂರು ರವರ ಅನುಮತಿ ದಿನಾಂಕ: 16ನೇ ಜುಲೈ 2009

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕಛೇರಿಯ ವಾಹನ ಸಂಖ್ಯೆ ಸಿ.ಎ.ಜಿ. 9119 (ಮಾಡೆಲ್ 1986 ಎಂಜಿನ್ ಸಂಖ್ಯೆ: DI 01015 ಡೀಸಲ್ ಜೀಪ್ ಮಹೇಂದ್ರ & ಮಹೇಂದ್ರ) ಅನ್ನು ದಿನಾಂಕ:15.12.2009 ರಂದು ಬೆಳಿಗ್ಗೆ 11.00 ಗಂಟೆಗೆ ಕಛೇರಿಯ ಆವರಣದಲ್ಲಿ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಬಹಿರಂಗವಾಗಿ ಸಾರ್ವಜನಿಕರ ಸಮಕ್ಷಮದಲ್ಲಿ ವಿಲೇವಾರಿ ಮಾಡಲಾಗುವುದು.

ನಿಬಂಧನೆಗಳು

1. ಹರಾಜಿನಲ್ಲಿ ಭಾಗವಹಿಸುವ ಸಾರ್ವಜನಿಕರು ಹರಾಜಿಗೆ ಮೊದಲು ರೂ.5000.00 (ಐದು ಸಾವಿರ) ಗಳನ್ನು ನಗದು ರೂಪದಲ್ಲಿ ಹರಾಜು ನಡೆಸುವ ಅಧಿಕಾರಿಗಳಲ್ಲಿ ಮುಂಗಡ ಠೇವಣಿ ಸಂದಾಯ ಮಾಡಿ ಹರಾಜಿನಲ್ಲಿ ಭಾಗವಹಿಸುವುದು.
2. ಹರಾಜಿನಲ್ಲಿ ಯಶಸ್ವಿಯಾಗದವರ ಠೇವಣಿ ಹಣವನ್ನು ಹರಾಜು ಮುಗಿದ ನಂತರ ಅಂದೇ ವಾಪಸ್ ಹಿಂತಿರುಗಿಸಲಾಗುವುದು.
3. ಹರಾಜು ಮುಗಿದ ನಂತರ ಯಶಸ್ವಿ ಹರಾಜುದಾರರು ಹರಾಜಿನ ಪೂರ್ಣ ಮೊಬಲಗನ್ನು ಮತ್ತು ಇತರೆ ತೆರಿಗೆ ಪಾವತಿ ಮಾಡಿ ರಶೀದಿಯನ್ನು ಪಡೆಯತಕ್ಕದ್ದು. ತಪ್ಪಿದಲ್ಲಿ ಹಣವನ್ನು ಕಂದಾಯ ಬಾಕಿ ಎಂದು ಪರಿಗಣಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಹಾಗೂ ಪುನಃ ಹರಾಜು ಮಾಡಿದಲ್ಲಿ ಇದರಿಂದ ಲಾಭವೇನಾದರೂ ಬಂದಲ್ಲಿ ಹರಾಜುದಾರರು ಇದಕ್ಕೆ ಅರ್ಹರಾಗಿರುವುದಿಲ್ಲ.
4. ಹರಾಜನ್ನು ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ತುಮಕೂರು ಇವರಿಂದ ನೇಮಿಸಲ್ಪಟ್ಟ ಅಧಿಕಾರಿಗಳಿಂದ ಹರಾಜು ನಡೆಸಲಾಗುವುದು. ಮತ್ತು ಹರಾಜಿನ ಬಗ್ಗೆ ತೀರ್ಮಾನವನ್ನು ಹರಾಜು ನಡೆಸುವ ಅಧಿಕಾರಿಗಳಿಗೆ ಕಾಯ್ದಿರಿಸಿಕೊಳ್ಳಲಾಗಿದೆ.
5. ಹರಾಜಿನಲ್ಲಿರುವ ಹಳೆಯ ವಾಹನ ಸಿ.ಎ.ಜಿ. 9119 ಈಗ ಹೇಗಿದೆಯೋ ಹಾಗೆಯೇ ಮತ್ತು ಎಲ್ಲಿದೆಯೋ ಅಲ್ಲಿಯೇ ಬಹಿರಂಗವಾಗಿ ಹರಾಜು ಮಾಡಲಾಗುವುದು. ಮತ್ತು ಈ ಬಗ್ಗೆ ಯಾವ ವಿಧವಾದ ದೂರು ಇತ್ಯಾದಿಗಳನ್ನು ಸ್ವೀಕರಿಸಲಾಗುವುದಿಲ್ಲ.
6. ಹರಾಜಿನಲ್ಲಿ ಕೊಂಡ ಹಳೆಯ ವಾಹನ ಸಿ.ಎ.ಜಿ.9119ನ್ನು ಹರಾಜು ನಡೆದ ದಿನಾಂಕ ಅಂದರೆ, 15.12.2009 ರಂದು ಯಶಸ್ವಿ ಬಿಡ್ಡುದಾರರು, ಕ್ರಮ ಸಂಖ್ಯೆ.3ರಲ್ಲಿ ಸೂಚಿಸಿರುವ ನಿಬಂಧನೆಯಂತೆ ಹಣ ಪಾವತಿಸಿ ತಮ್ಮ ಸ್ವಾಧೀನಕ್ಕೆ ಪಡೆಯತಕ್ಕದ್ದು. ತಪ್ಪಿದಲ್ಲಿ ಮುಂದಿನ ಅನಾನುಕೂಲಕ್ಕೆ ಕಛೇರಿಯು ಜವಾಬ್ದಾರಿಯಾಗುವುದಿಲ್ಲ.

7. ಹರಾಜಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರುಗಳು ಮತ್ತು ನಿಗಮ ಮಂಡಳಿಗಳ ಸಿಬ್ಬಂದಿಯವರು ಭಾಗವಹಿಸುವಂತಿಲ್ಲ.
8. ಕರ್ನಾಟಕ ಮೋಟಾರು ವಾಹನ ಕಾಯ್ದೆ 55ರ ರೀತ್ಯ ಮೇಲೆ ತಿಳಿಸಿರುವ ವಾಹನ ಸಂಬಂಧದಲ್ಲಿ ವಾಹನ ತೆರಿಗೆ ಬಾಕಿ ಇದ್ದಲ್ಲಿ ತೆರಿಗೆಯನ್ನು ಸಹ ಹರಾಜಿನಲ್ಲಿ ಭಾಗವಹಿಸಿ ಯಶಸ್ವಿಯಾದ ಬಿಡ್ಡುದಾರರಿಂದಲೇ ವಸೂಲಿ ಮಾಡಲಾಗುವುದು.
9. ಹರಾಜಿನ ಇತರೆ ಮಾಹಿತಿಗಳು ಬೇಕಾದಲ್ಲಿ ಕಛೇರಿಯ ಎಲ್ಲಾ ಕೆಲಸದ ವೇಳೆಯ ದಿನಗಳಲ್ಲಿ ಖುದ್ದಾಗಿ ಭೇಟಿ ಮಾಡಿ ಮಾಹಿತಿ ಪಡೆಯತಕ್ಕದ್ದು.

ಡಾ॥ ಎನ್. ರಮೇಶ್

ಪಿ.ಆರ್. 925 ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಮಧುಗಿರಿ

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ – 576101

ಸಂಕ್ಷಿಪ್ತ ಟೆಂಡರು ಪ್ರಕಟಣೆ

ನಂ. ಕಾನಿಇಂ: ಬಂಮೀವಿ: ಉಡುಪಿ: ಎಇ : ಟೆಂಡರು ಸೂಚನೆ : 1008 :2009–2010: ದಿನಾಂಕ: 24ನೇ ಅಕ್ಟೋಬರ್ 2009

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ ಇವರು ಈ ಕೆಳಕಂಡ ಕಾಮಗಾರಿಗಾಗಿ K/W-1 ನಮೂನೆಯಲ್ಲಿ ಪ್ರತ್ಯೇಕ ಮೊಹರಾದ ಟೆಂಡರುಗಳನ್ನು ಕರ್ನಾಟಕ ರಾಜ್ಯ ಲೋಕೋಪಯೋಗಿ ಇಲಾಖೆಯಲ್ಲಿ ಹೆಸರನ್ನು ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಕೆಲಸದ ಹೆಸರನ್ನು ಮೊಹರಾದ ಲಕೋಟೆಯ ಮೇಲೆ ನಮೂದಿಸಿ ನಿಗದಿತ ನಮೂನೆಯಲ್ಲಿ ದ್ವಿಪ್ರತಿಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರುಗಳನ್ನು ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ ಇವರು ದಿನಾಂಕ:**23.11.2009** ರಂದು ಸಂಜೆ 4.00 ಗಂಟೆಯವರೆಗೆ ಸ್ವೀಕರಿಸುವರು. ಟೆಂಡರನ್ನು ಸಾಧ್ಯವಾದಲ್ಲಿ ಅದೇ ದಿನ 4.30 ಗಂಟೆಗೆ ತೆರೆಯಲಾಗುವುದು.

ನಿಬಂಧನೆಗಳೊಂದಿಗೆ ಟೆಂಡರನ್ನು ಒದಗಿಸಿದಲ್ಲಿ ತಿರಸ್ಕರಿಸಲಾಗುವುದು.

ಖಾಲಿ ಟೆಂಡರು ಫಾರಂಗಳಿಗಾಗಿ ಅರ್ಜಿಯನ್ನು ನಿಗದಿಪಡಿಸಿದ ಬೆಲೆಯೊಂದಿಗೆ (ಅದನ್ನು ಹಿಂತಿರುಗಿಸುವುದಿಲ್ಲ) ದಿನಾಂಕ: **21.11.2009** ರವರೆಗೆ ಸಂಜೆ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಗುತ್ತಿಗೆದಾರರು ಅರ್ಜಿ ಫಾರಂನೊಂದಿಗೆ ರಿಜಿಸ್ಟ್ರೇಷನ್ ನವೀಕರಣ ಸರ್ಟಿಫೈಡ್ ಪ್ರತಿಯನ್ನು ಲಗ್ತೀಕರಿಸಬೇಕು.

ಖಾಲಿ ಟೆಂಡರು ಫಾರಂಗಳನ್ನು ದಿನಾಂಕ: **21.11.2009** ರವರೆಗೆ ಕಛೇರಿ ಕೆಲಸದ ವೇಳೆಯಲ್ಲಿ ವಿತರಿಸಲಾಗುವುದು. ಹೆಚ್ಚಿನ ವಿವರಗಳನ್ನು ವಿಭಾಗೀಯ ಕಛೇರಿಯಲ್ಲಿ ಎಲ್ಲಾ ಕೆಲಸದ ದಿನಗಳಂದು ಕಛೇರಿ ವೇಳೆಯಲ್ಲಿ ನೀಡಲಾಗುವುದು ಹಾಗೂ ಸದರಿ ಪ್ರಕಟಣೆಯ ವಿವರಗಳನ್ನು www.kpwd.gov.in website ನಲ್ಲಿ ನೋಡಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರು ಅಂದಾಜು ಮೊತ್ತ (ಲಕ್ಷಗಳಲ್ಲಿ)	ಇ.ಎಂ.ಡಿ. (ರೂ.ಗಳಲ್ಲಿ)	ಕಾಮಗಾರಿ ಮುಗಿಸಲು ನಿಗದಿಪಡಿಸಿದ ಅವಧಿ (ಮಳೆಗಾಲದ ಅವಧಿ ಹೊರತುಪಡಿಸಿ)	ಟೆಂಡರು ನಮೂನೆ	ಟೆಂಡರು ಫಾರಂ ಬೆಲೆ	ಅರ್ಹ ಗುತ್ತಿಗೆದಾರರು
1.	ಮಂಗಳೂರು ಬಂದರು ಲಕ್ಷದ್ವೀಪ ಕಛೇರಿಯ ಮುಂಭಾಗ ಉಳಿದಿರುವ ಭಾಗಕ್ಕೆ ಕಾಂಕ್ರೀಟೀಕರಣ ಮಾಡುವ ಕಾಮಗಾರಿ	ರೂ.7.50 ಲಕ್ಷ	18800.00	1 ತಿಂಗಳು	ಐಟಂ ರೇಟ್	ರೂ.1500.00	Class III & above PWD ಗುತ್ತಿಗೆದಾರರು
2.	ಮಂಗಳೂರು ಬಂದರು ದಕ್ಷಿಣ ಧಕ್ಕೆಯಲ್ಲಿ ಬಾಕಿ ಉಳಿದಿರುವ ಭಾಗಕ್ಕೆ ಕಾಂಕ್ರೀಟೀಕರಣ ಮಾಡುವ ಕಾಮಗಾರಿ	ರೂ.13.00 ಲಕ್ಷ	32500.00	2 ತಿಂಗಳು	–ಅದೇ–	ರೂ.2000.00	Class II & above PWD ಗುತ್ತಿಗೆದಾರರು
3.	ಉಡುಪಿ ತಾಲ್ಲೂಕು ಮಲ್ಪೆ ಮೀನುಗಾರಿಕಾ ಬಂದರು ಹೊಸ ವಾರ್ಫ್ ಹಿಂಭಾಗದ ಜಾಗವನ್ನು ನೆಲಗಟ್ಟು ಮಾಡಿ ಕಾಂಕ್ರೀಟೀಕರಣ ಮಾಡುವ ಕಾಮಗಾರಿ	ರೂ.20.00 ಲಕ್ಷ	50000.00	2 ತಿಂಗಳು	–ಅದೇ–	ರೂ.2500.00	Class II & above PWD ಗುತ್ತಿಗೆದಾರರು

ಸೂಚನೆಗಳು: 1. ಕಾಮಗಾರಿಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಗುತ್ತಿಗೆದಾರರೇ ಸ್ವಂತ ಖರ್ಚಿನಿಂದ ಪೂರೈಸಿಕೊಳ್ಳತಕ್ಕದ್ದು. ಹಾಗೂ ಈ ಬಗ್ಗೆ ಸಾಮಗ್ರಿಗಳ ಗುಣ ಮಟ್ಟದ ಬಗ್ಗೆ ಸಕ್ಷಮ ಪ್ರಯೋಗಾಲಯಗಳಿಂದ ತಪಾಸಣೆ ನಡೆಸಿ ಪ್ರಮಾಣ ಪತ್ರವನ್ನು ಒದಗಿಸುವುದು.

2. ಮೇಲೆ ತಿಳಿಸಿದ ದಿನಾಂಕಗಳಂದು ಸರ್ಕಾರಿ ರಜೆಗಳು ಬಂದರೆ ಅದರ ಮುಂದಿನ ದಿನಾಂಕವನ್ನು ಪರಿಗಣಿಸುವುದು.
3. ಇ.ಎಂ.ಡಿ. ಯನ್ನು ಡಿಮಾಂಡ್ ಡ್ರಾಫ್ಟ್ ಅಥವಾ ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ ಇವರ ಹೆಸರಿನಲ್ಲಿ ಪ್ಲೆಡ್ಜ್ ಮಾಡಲಾದ ರಾಷ್ಟ್ರೀಯ ಉಳಿತಾಯ ಪತ್ರಗಳು ಅಥವಾ ಶೆಡ್ಯೂಲ್ಡ್ ಬ್ಯಾಂಕಿನ ಇಲ್ಲವೆ ರಾಷ್ಟ್ರೀಕೃತ ಬ್ಯಾಂಕಿನಿಂದ ಕೊಡಮಾಡಿದ ಬ್ಯಾಂಕರ್ಸ್ ಚೆಕ್ ರೂಪದಲ್ಲಿ ಮಾತ್ರ ಸಲ್ಲಿಸತಕ್ಕದ್ದು. ಇ.ಎಂ.ಡಿ. ಯನ್ನು ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ಸ್ವೀಕರಿಸಲಾಗುವುದಿಲ್ಲ.
4. ಗುತ್ತಿಗೆದಾರರು ಟೆಂಡರಿಗಿಟ್ಟ ಕಾಮಗಾರಿಯ ಮೊತ್ತದ ಶೇಕಡಾ 50 ಭಾಗದಷ್ಟು ಮೊತ್ತದ ಇದೇ ರೀತಿಯ ಒಂದು ಕಾಮಗಾರಿಯನ್ನು ಕಳೆದ ಐದು ವರ್ಷಗಳಲ್ಲಿ ಒಂದೇ ಹಣಕಾಸು ವರ್ಷದಲ್ಲಿ ಮಾಡಿದ ಬಗ್ಗೆ ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್ ರವರಿಂದ ಪ್ರಮಾಣ ಪತ್ರವನ್ನು ಮತ್ತು ಗುತ್ತಿಗೆದಾರರ ನೊಂದಣಿ ಪತ್ರದ ಪ್ರತಿಯನ್ನು ಅರ್ಜಿಯೊಂದಿಗೆ ತಪ್ಪದೆ ಸಲ್ಲಿಸತಕ್ಕದ್ದು.
5. "ಫರ್‌ಫಾರ್ಮೆನ್ಸ್ ಸೆಕ್ಯೂರಿಟಿ" (ಸಾಧನಾ ಭದ್ರತೆ) ಟೆಂಡರ್ ಅನುಮೋದನೆಗೊಂಡ 20 ದಿನಗಳೊಳಗೆ ಅನುಮೋದಿತ ಟೆಂಡರ್‌ದಾರರು ಇಲಾಖೆಗೆ ಅನುಮೋದನೆಗೊಂಡ ಟೆಂಡರ್ ಮೊತ್ತದ ಶೇ.5ರಷ್ಟು ಹಾಗೂ ಅಸಮತೋಲನ ಟೆಂಡರ್ ಏನಾದರೂ ಇದ್ದರೆ ಇದಕ್ಕೆ ಹೆಚ್ಚುವರಿ ಭದ್ರತಾ ಠೇವಣಿಯನ್ನು ಟೆಂಡರ್ ನಿಯಮ 24.1 ರೀತ್ಯಾ ಸಾಧನಾ ಭದ್ರತಾ ಠೇವಣಿ ರೂಪದಲ್ಲಿ ಪಾವತಿ ಮಾಡತಕ್ಕದ್ದು.
6. ಕೆಲಸಗಾರರ ಕಲ್ಯಾಣ ಕಾಯ್ದೆ 1966ರಡಿ ಕಾಮಗಾರಿಯ ವೆಚ್ಚದ ಶೇಕಡಾ 1 ಸುಂಕವನ್ನು ವಸೂಲು ಮಾಡಲಾಗುವುದು.

ಕಾರ್ಯನಿರ್ವಾಹಕ ಇಂಜಿನಿಯರ್,
ಪಿ.ಆರ್. 926 ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ.

ಪೊಲೀಸ್ ಅಧೀಕ್ಷಕರವರ ಕಛೇರಿ, ರಾಮನಗರ ಜಿಲ್ಲೆ, ರಾಮನಗರ

ಅಧಿಸೂಚನೆ

ಸಂಖ್ಯೆ:101/ಸಂಗ್ರಹ/2009-10, ರಾಮನಗರ, ದಿನಾಂಕ: 14ನೇ ಅಕ್ಟೋಬರ್ 2009

ವಿಷಯ: ರಾಮನಗರ ಜಿಲ್ಲೆಯ ಹಳೆಯದಾದ 102 ಮತ್ತು 60 ಅಡಿ ಎತ್ತರದ ನಿಸ್ತಂತು ಏರಿಯಲ್ ಟವರ್‌ಗಳನ್ನು ಬಹಿರಂಗ ಹರಾಜು/ಟೆಂಡರ್ ಮೂಲಕ ವಿಲೇವಾರಿ ಮಾಡುವ ಬಗ್ಗೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ರಾಮನಗರ ಜಿಲ್ಲೆಯ ಈ ಕೆಳಕಂಡ ಪೊಲೀಸ್ ಠಾಣೆಗಳಲ್ಲಿ 08 ಸಂಖ್ಯೆಯ ಹಳೆಯ ನಿರುಪಯುಕ್ತ 102 ಮತ್ತು 60 ಅಡಿ ಎತ್ತರದ ನಿಸ್ತಂತು ಏರಿಯಲ್ ಟವರ್‌ಗಳನ್ನು ದಿ: 04.12.09 ರ ಬೆಳಿಗ್ಗೆ 12-00 ಗಂಟೆಗೆ ಜಿಲ್ಲಾ ಪೊಲೀಸ್ ಕಛೇರಿಯ ಆವರಣದಲ್ಲಿ ಬಹಿರಂಗ ಹರಾಜು/ಟೆಂಡರ್ ಮೂಲಕ ವಿಲೇವಾರಿ ಮಾಡಲು ನಿರ್ಧರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ರಾಮನಗರ ಜಿಲ್ಲಾ ಪೊಲೀಸ್ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಬಂದು ತಿಳಿದುಕೊಳ್ಳಲು ಕೋರಲಾಗಿದೆ.

ಕ್ರ. ಸಂ.	ಪೊಲೀಸ್ ಠಾಣೆ	ಏರಿಯಲ್ ಟವರ್‌ಗಳ ವಿವರ	ಪ್ರಮಾಣ
01	ಚನ್ನಪಟ್ಟಣ ಪುರ ಠಾಣೆ	102 ಅಡಿ ಟವರ್ (4 ಮೂಲೆ)	01 ಸಂಖ್ಯೆ
02	ಕೋಡಿಹಳ್ಳಿ ಪೊಲೀಸ್ ಠಾಣೆ	60 ಅಡಿ ಟ್ಯೂಬಲರ್ ಕಂಬ	01 ಸಂಖ್ಯೆ
03	ಹಾರೋಹಳ್ಳಿ ಪೊಲೀಸ್ ಠಾಣೆ	60 ಅಡಿ ಟ್ಯೂಬಲರ್ ಕಂಬ	01 ಸಂಖ್ಯೆ
04	ರಾಮನಗರ ಪುರ ಪೊಲೀಸ್ ಠಾಣೆ	60 ಅಡಿ ಟ್ಯೂಬಲರ್ ಕಂಬ	01 ಸಂಖ್ಯೆ
05	ಕನಕಪುರ ಪುರ ಪೊಲೀಸ್ ಠಾಣೆ	60 ಅಡಿ ಟ್ಯೂಬಲರ್ ಕಂಬ	01 ಸಂಖ್ಯೆ
06	ಅಕ್ಕೂರು ಪೊಲೀಸ್ ಠಾಣೆ	60 ಅಡಿ ಲ್ಯಾಟೀಸ್ ಟವರ್	01 ಸಂಖ್ಯೆ
07	ತಿಪ್ಪಗೊಂಡನಹಳ್ಳಿ	60 ಅಡಿ ಲ್ಯಾಟೀಸ್ ಟವರ್	01 ಸಂಖ್ಯೆ
08	ಸಾತನೂರು ಪೊಲೀಸ್ ಠಾಣೆ	60 ಅಡಿ ಲ್ಯಾಟೀಸ್ ಟವರ್	01 ಸಂಖ್ಯೆ

ಹರಾಜು/ಟೆಂಡರ್‌ನ ಷರತ್ತು ಮತ್ತು ನಿಬಂಧನೆಗಳು

1) ಮೊಹರು ಮಾಡಿದ (ಸೀಲ್ಡ್ ಟೆಂಡರ್) ಲಕೋಟೆಯನ್ನು ಪೊಲೀಸ್ ಅಧೀಕ್ಷಕರು, ರಾಮನಗರ ಜಿಲ್ಲೆ ರಾಮನಗರ ಇವರ ವಿಳಾಸಕ್ಕೆ ಕಳುಹಿಸಬೇಕು. ಲಕೋಟೆಯ ಮೇಲೆ ನಿರುಪಯುಕ್ತ ನಿಸ್ತಂತು ಟವರ್‌ಗಳನ್ನು ಖರೀದಿಸುವ ಬಗ್ಗೆ ಎಂಬುದಾಗಿ ಬಿಡಿ ಅಕ್ಷರಗಳಲ್ಲಿ ನಮೂದಿಸಿರಬೇಕು.

2) ಪ್ರತಿಯೊಬ್ಬ ಸವಾಲುದಾರರು ಹರಾಜು ನಡೆಯುವ ವೇಳೆಗಿಂತ 2 ಗಂಟೆ ಮುಂಚಿತವಾಗಿ ತಮ್ಮ ಹೆಸರನ್ನು ನೊಂದಾಯಿಸಿ ರೂ.5000/–ಗಳನ್ನು ಠೇವಣಿಯನ್ನಾಗಿ ಪಾವತಿ ಮಾಡತಕ್ಕದ್ದು.

3) ಟೆಂಡರ್ ಫಾರಂಗಳನ್ನು ವರ್ಗಾವಣೆ ಮಾಡಲಾಗುವುದಿಲ್ಲ. ಪೂರ್ಣಗೊಳಿಸಿದ ಟೆಂಡರ್‌ಗಳನ್ನು ದಿ:30.11.09ರಂದು ಸಂಜೆ 4–00 ಗಂಟೆ ಒಳಗಾಗಿ ಈ ಕಛೇರಿಗೆ ಕಳುಹಿಸಬೇಕು. ನಂತರ ಬಂದಂತಹ ಟೆಂಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಯ ಜೊತೆಯಲ್ಲಿ ಟೆಂಡರ್‌ನಲ್ಲಿ ನಮೂದಿಸಿರುವ ಒಟ್ಟು ಮೊತ್ತದ ಶೇಕಡಾ 2 ರಷ್ಟು ಮೊತ್ತದ ಡಿ.ಡಿ.ಯನ್ನು ಪೊಲೀಸ್ ಅಧೀಕ್ಷಕರು, ರಾಮನಗರ ಜಿಲ್ಲೆ ರಾಮನಗರ ಇವರ ಹೆಸರಿಗೆ ಪಡೆದು ಕಳುಹಿಸಬೇಕು.

4) ಡಿ.ಡಿ. ಟೆಂಡರ್ ಫಾರಂನಲ್ಲಿ ಬರೆಯುವಾಗ ಏನಾದರೂ ತಿದ್ದುಪಡಿ ಮಾಡಿದ್ದರೆ ಆ ಸ್ಥಳದಲ್ಲಿ ಟೆಂಡರ್‌ದಾರರು ಪೂರ್ಣ ಸಹಿ ಮಾಡಬೇಕು.

5) ಬಹಿರಂಗ ಹರಾಜಿನಲ್ಲಿ ಅತೀ ಹೆಚ್ಚಿನ ಬಿಡ್ಡಿನ ದರವನ್ನು ಪರಿಶೀಲಿಸಿದ ನಂತರ ಟೆಂಡರ್ ಲಕೋಟೆಗಳನ್ನು ಪೊಲೀಸ್ ಅಧೀಕ್ಷಕರು ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಗಳಿಂದ ಎಲ್ಲರ ಸಮ್ಮುಖದಲ್ಲಿ ತೆರೆಯಲಾಗುವುದು. ಈ ಎರಡರಲ್ಲಿ ಯಾರು ಹೆಚ್ಚಿನ ದರವನ್ನು ನೀಡಿರುತ್ತಾರೊ ಅವರನ್ನು ಯಶಸ್ವಿ ಬಿಡ್ಡುದಾರರೆಂದು ಪರಿಗಣಿಸಲಾಗುವುದು.

6) ಬಿಡ್ಡುದಾರರು ಈ ಸಂಬಂಧವಾಗಿ ಇರುವ ಸರ್ಕಾರದ ಎಲ್ಲಾ ಆದೇಶಗಳಿಗೆ ಮತ್ತು ನಿಯಮಗಳಿಗೆ ಬದ್ಧರಾಗಿರಬೇಕು.

7) ಹರಾಜು/ಟೆಂಡರ್‌ನಲ್ಲಿ ಏನಾದರೂ ತಕರಾರುಗಳು ಬಂದಲ್ಲಿ ಪೊಲೀಸ್ ಅಧೀಕ್ಷಕರು ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಗಳು ನೀಡುವ ನಿರ್ಣಯವೇ ಅಂತಿಮವಾಗಿರುತ್ತದೆ.

8) ಪೊಲೀಸ್ ಅಧೀಕ್ಷಕರು ಹರಾಜು/ಟೆಂಡರ್‌ನ ಸವಾಲನ್ನು ಯಾವುದೇ ಕಾರಣವಿಲ್ಲದೇ ಸ್ವೀಕರಿಸಬಹುದು ಅಥವಾ ನಿರಾಕರಿಸಬಹುದು. ಇದರ ಮೇಲೆ ಯಾವುದೇ ಅಧಿಕಾರವಿರುವುದಿಲ್ಲ. ಪೊಲೀಸ್ ಅಧೀಕ್ಷಕರ ನಿರ್ಣಯವೇ ಅಂತಿಮವಾಗಿರುತ್ತದೆ.

9) ಹರಾಜಿನ ದಿನಾಂಕವನ್ನು ಯಾವುದೇ ಕಾರಣಕ್ಕಾಗಿ ರದ್ದುಗೊಳಿಸುವ ಅಥವಾ ಮುಂದೂಡುವ ಅಧಿಕಾರವನ್ನು ರಾಮನಗರ ಜಿಲ್ಲಾ ಪೊಲೀಸ್ ಅಧೀಕ್ಷಕರು ಹೊಂದಿರುತ್ತಾರೆ.

10) ಮಾರಾಟ ತೆರಿಗೆಯನ್ನು ಹಾಲಿ ಚಲಾವಣೆಯಲ್ಲಿರುವ ನಿಯಮಗಳ ಆಧಾರದ ಮೇಲೆ ಸವಾಲಿನ ಹಣದ ಜೊತೆಗೆ ವಸೂಲಿ ಮಾಡಲಾಗುವುದು.

11) ಯಶಸ್ವಿ ಟೆಂಡರ್‌ದಾರರು/ಬಿಡ್ಡುದಾರರು ಬಿಡ್ಡಿನ ಹಣವನ್ನು ಸಂಪೂರ್ಣವಾಗಿ ಸ್ಥಳದಲ್ಲಿಯೇ ತುಂಬಬೇಕು ಮತ್ತು ಏರಿಯಲ್ ನಿಸ್ತಂತು ಟವರ್‌ಗಳು ಎಲ್ಲಿರುತ್ತವೆಯೋ ಮತ್ತು ಯಾವ ಸ್ಥಿತಿಯಲ್ಲಿರುತ್ತವೆಯೋ ಹಾಗೆಯೇ ಆದೇಶದ ದಿನದೊಳಗಾಗಿ ತಮ್ಮ ಸ್ವಂತ ಖರ್ಚಿನಲ್ಲಿ ತೆಗೆದುಕೊಂಡು ಹೋಗುವುದು.

ಎಸ್.ಬಿ. ಬಿಸನಳ್ಳಿ, ಐ.ಪಿ.ಎಸ್

ಪಿ.ಆರ್. 912 ಪೊಲೀಸ್ ಅಧೀಕ್ಷಕರು, ರಾಮನಗರ ಜಿಲ್ಲೆ, ರಾಮನಗರ.

Office of the Directorate Pre-University Education, 18th Cross, Sampige Road, Malleswaram, Bangalore-12

TENDER NOTIFICATION

(Two Cover System)

No: Pue/Exam/Scanning Tender/2009-10, Dated: 26th October 2009

Sealed tenders are invited for printing, supplying, Scanning and over printing of the

a) OMR/ICR Stationery sheets for Private, I PU Candidates, Lecturers, MCA for Fail Candidates, Marks list of Theory & Practical and Valuators Duty Report.

b) Scanning and Processing of OMR/ICR forms of Private, I PU Candidates, Lecturers, MCA for Fail Candidates, Marks list of Theory & Practical and Valuators Duty Report.

c) Laser Over printing of A.T., Nominal Roll, Marks list, MCA of Failed Candidates, Valuators Appointment order and exam related duty forms.

from the competitive firms, having a turn over of not less than 1.00 crore per year. The approximate estimated cost of the tender is Rs.45 lakhs to 55 lakhs. The details of specification, number required and

the other details are available in office. Tender application can be obtained during office hours from 28.10.2009 to 24.11.2009 against a DD of Rs. 1000.00 + Rs. 40 VAT (Rupees One thousand and forty only) (Non-refundable) favouring Director, Pre-University Education, Bangalore. Tenders should be submitted in the prescribed format only on or before 03.00 pm on 24.11.2009 to Sri S. Shankara Narayana IAS, Director, Pre-University Education, 18th Cross,. Sampige Road, Malleswaram, Bangalore-560012

S. SHANKARA NARAYANA IAS
Chairman, Exam Tender Committee and Director,
Pre-University Education.

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ
18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–12
ಟೆಂಡರ್ ಅಧಿಸೂಚನೆ
(ದ್ವಿ–ಲಕೋಟೆ ಪದ್ಧತಿ)
ಸಂಖ್ಯೆ: ಪಪೂಶಿಇ/ಪರೀಕ್ಷೆ/ಸ್ಕ್ಯಾನಿಂಗ್ ಟೆಂಡರ್/2009–10, ದಿನಾಂಕ: 26ನೇ ಅಕ್ಟೋಬರ್ 2009

ಸ್ಟೇಷನರಿ ಫಾರಂಗಳನ್ನು, ಸ್ಕ್ಯಾನಿಂಗ್ ಕಾರ್ಯ ಹಾಗೂ ಮುದ್ರಣ ಕಾರ್ಯಕ್ಕೆ ಸೀಲ್ಡ್ ಲಕೋಟೆಗಳಲ್ಲಿ ಟೆಂಡರನ್ನು ಕರೆಯಲಾಗಿದೆ.

ಅ) ಒಎಂಆರ್/ಐಸಿಆರ್ ಸ್ಟೇಷನರಿ ಶೀಟ್‌ಗಳಲ್ಲಿ ಖಾಸಗಿ, ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಮಾಹಿತಿ, ಉಪನ್ಯಾಸಕರ, ಪುನರಾವರ್ತಿತ ವಿದ್ಯಾರ್ಥಿಗಳ ಮಾಹಿತಿ, ಥಿಯರಿ ಮತ್ತು ಪ್ರಾಯೋಗಿಕ ಮಾರ್ಕ್ಸ್ ಲಿಸ್ಟ್ ಮತ್ತು ಮೌಲ್ಯಮಾಪಕರ ಹಾಜರಿ ಪತ್ರಗಳು.

ಆ) ಒಎಂಆರ್/ಐಸಿಆರ್ ಶೀಟ್‌ಗಳ ಸ್ಕ್ಯಾನಿಂಗ್ ಮತ್ತು ಪ್ರೋಸೆಸಿಂಗ್ ಆಫ್ ಖಾಸಗಿ, ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಮಾಹಿತಿ, ಉಪನ್ಯಾಸಕರ, ಪುನರಾವರ್ತಿತ ವಿದ್ಯಾರ್ಥಿಗಳ ಮಾಹಿತಿ, ಥಿಯರಿ ಮತ್ತು ಪ್ರಾಯೋಗಿಕ ಮಾರ್ಕ್ಸ್ ಲಿಸ್ಟ್ ಮತ್ತು ಮೌಲ್ಯಮಾಪಕರ ಹಾಜರಿ ಪತ್ರಗಳು.

ಇ) ಲೇಸರ್ ಮುದ್ರಣ ಕಾರ್ಯಗಳು – ಎ.ಟಿ., ನಾಮಿನಲ್ ರೋಲ್, ಥಿಯರಿ ಮತ್ತು ಪ್ರಾಯೋಗಿಕ ಅಂಕಪಟ್ಟಿಗಳು, ಅನುತ್ತೀರ್ಣ ವಿದ್ಯಾರ್ಥಿಗಳ ಪತ್ರಗಳು, ಮೌಲ್ಯಮಾಪಕರ ನೇಮಕಾತಿ ಆದೇಶಗಳು ಮತ್ತು ಪರೀಕ್ಷಾ ಸಂಬಂಧ ಇತರೆ ಆದೇಶಗಳ ಮುದ್ರಣ.

ಟೆಂಡರ್‌ನಲ್ಲಿ ಭಾಗವಹಿಸುವ ಟೆಂಡರುದಾರರು ವಾರ್ಷಿಕ ವ್ಯವಹಾರದಲ್ಲಿ ಒಂದು ವರ್ಷದಲ್ಲಿ ಒಂದು ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ವ್ಯವಹಾರ ಮಾಡಿರಬೇಕು. ಟೆಂಡರಿನ ಅಂದಾಜು ಮೌಲ್ಯ ರೂ. 45 ಲಕ್ಷದಿಂದ 55 ಲಕ್ಷಗಳಾಗಬಹುದು. ಟೆಂಡರ್ ಅರ್ಜಿಗಳನ್ನು ರೂ. 1000/– + ರೂ. 40 ವ್ಯಾಟ್ (ಒಂದು ಸಾವಿರದ ನಲವತ್ತು ಮಾತ್ರ) ಡಿಡಿ ಯನ್ನು ಪಾವತಿಸಿ ಅರ್ಜಿಗಳನ್ನು ಪಡೆಯಬಹುದಾಗಿದೆ. ಟೆಂಡರ್ ಅರ್ಜಿ, ಅಗತ್ಯತೆಗಳು ಹಾಗೂ ಇತರೆ ವಿವರಗಳನ್ನು ಮತ್ತು ನಮೂನೆಗಳನ್ನು ದಿನಾಂಕ:28.10.2009 ರಿಂದ 24.11.2009 ರವರೆಗೆ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ನಿಗದಿತ ನಮೂನೆಯಲ್ಲಿ ದಿನಾಂಕ: 24.11.2009ರ 03–00 ಗಂಟೆಯೊಳಗೆ ಶ್ರೀ ಎಸ್. ಶಂಕರನಾರಾಯಣ, ಭಾ.ಆ.ಸೇ., ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560012 ಇವರಿಗೆ ತಲುಪುವಂತೆ ಸಲ್ಲಿಸುವುದು.

ಎಸ್. ಶಂಕರನಾರಾಯಣ ಭಾಆಸೇ
ಪಿ.ಆರ್. 933 ಅಧ್ಯಕ್ಷರು, ಪರೀಕ್ಷೆ ಟೆಂಡರ್ ಸಮಿತಿ ಮತ್ತು ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
ನಂ:ಕಾಇಂ–ಲೋವಿ:ಚಿ:ಕಟ್ಟಡಗಳು:12:2009–10, ದಿನಾಂಕ: 26ನೇ ಅಕ್ಟೋಬರ್ 2009

1) ಇ–ಟೆಂಡರ್ ಉಲ್ಲೇಖ:– KPWD/2009-10/WORK_INDENT 1601

ಕರ್ನಾಟಕ ರಾಜ್ಯಪಾಲರ ಪರವಾಗಿ, 1ನೇ ದರ್ಜೆ ಗುತ್ತಿಗೆದಾರರಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಕಾಮಗಾರಿ ವಿವರಗಳು ಈ ಕೆಳಗಿನಂತಿವೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗೆ ಇಟ್ಟಿರುವ ಹಣ ರೂ. ಗಳಲ್ಲಿ	ಮುಂಗಡ ಠೇವಣಿ ಹಣ ರೂ.ಗಳಲ್ಲಿ
1	ಚಿತ್ರದುರ್ಗ ನಗರದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿ.	51448307.66	771725–00

ಅರ್ಹ ಗುತ್ತಿಗೆದಾರರು ವೆಬ್ ಸೈಟ್ www.eproc.Karnataka.gov.in/eportal/index.seam ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ.

ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ : 17.11.2009 ಸಮಯ: 17.30
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 20.11.2009 ಸಮಯ: 16.00
ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ : 25.11.2009 ಸಮಯ: 11.00
ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ : 30.11.2009 ಸಮಯ: 11.00

ಸೂಚನೆ: ಈ ಮೇಲ್ಕಂಡ ಕಾಮಗಾರಿಗಳ ಮುಂದೆ ನಮೂದಿಸಿದ ಟೆಂಡರಿಗಿಟ್ಟ ಮೊತ್ತ ಮತ್ತು ಮುಂಗಡ ಹಣ ಠೇವಣಿ (ಇ.ಎಂ.ಡಿ) ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಬಿಡ್ ಡಾಕ್ಯುಮೆಂಟ್‌ನಲ್ಲಿ ನಮೂದಿಸಿರುವ ಟೆಂಡರಿಗಿಟ್ಟ ಮೊತ್ತ ಮತ್ತು ಮುಂಗಡ ಹಣ ಠೇವಣಿ (ಇ.ಎಂ.ಡಿ) ಮೊತ್ತವು ಅಂತಿಮವಾಗಿರುತ್ತದೆ.

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ: 080–22485867 ರಿಂದ ಮಾಹಿತಿ ಪಡೆಯಬಹುದು.

ಕಾರ್ಯಪಾಲಕ ಅಭಿಯಂತರರು,
ಪಿ.ಆರ್. 928 ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಭಾಗ, ಚಿತ್ರದುರ್ಗ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯನಿರ್ವಾಹಕ ಇಂಜಿನೀಯರರ ಕಚೇರಿ, ಸಣ್ಣ ನೀರಾವರಿ ವಿಭಾಗ, ಬೆಳಗಾವಿ.

ಕ್ರಸಂ.ಸನೀವಿ.ಬೆಳಗಾವಿ/ಸ.ಇಂ./ಟೆಂಡರ್/2009–10/3384, ದಿನಾಂಕ: 10ನೇ ಅಕ್ಟೋಬರ್ 2009

ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಪದ್ಧತಿ ಕೆ/ಡಬ್ಲ್ಯೂ 4)

1) ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಐಟಂ ರೇಟ್ ಟೆಂಡರ್‌ನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 2000 ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಪ್ರಕಾರ ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ ಇವರಿಂದ ಆಹ್ವಾನಿಸಲಾಗಿದೆ. ಗುತ್ತಿಗೆ ಪಡೆಯಲು ಕನಿಷ್ಠ ಅವಶ್ಯಕ ಅರ್ಹತೆಗಳಿಗಾಗಿ ಕೆ/ಡಬ್ಲ್ಯೂ–4 ಗುತ್ತಿಗೆದಾರರ ಸೂಚನೆಗಳಲ್ಲಿನ ಕಲಂ (3) ನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ.

2) ದ್ವಿ ಲಕೋಟೆಗಳಲ್ಲಿ ಒಂದು ತಾಂತ್ರಿಕ ಬಿಡ್ ಎರಡನೆಯದು ಆರ್ಥಿಕ ಬಿಡ್ ಆಗಿರುತ್ತದೆ. ತಾಂತ್ರಿಕ ಬಿಡ್ ಅನ್ನು ಪ್ರಥಮ ಹಂತದಲ್ಲಿ ತೆರೆಯಲಾಗುವುದು ತದನಂತರ ತಾಂತ್ರಿಕಬಿಡ್‌ನಲ್ಲಿ ಅರ್ಹತೆ ಪಡೆದ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು ಮಾತ್ರ ತೆರೆದು ವಿಶ್ಲೇಷಿಸಲಾಗುವುದು. ಈ ವಿಷಯದಲ್ಲಿ ಸಕ್ಷಮ ಅಧಿಕಾರಿಗಳ ನಿರ್ಧಾರವು ಅಂತಿಮವಾಗಿರುತ್ತದೆ.

3) ಕಾಮಗಾರಿಗೆ ಸಂಬಂಧಿಸಿದ ಐಟಂವಾರು ಪರಿಮಾಣ, ಗುತ್ತಿಗೆಯ ಪತ್ರಗಳು, ಕರಾರುಗಳು, ಕೈಕೊಳ್ಳಬೇಕಾದ ಕಾಮಗಾರಿಯ ವಿವರ, ಹಾಗೂ ನಕ್ಷೆಗಳು ಇತ್ಯಾದಿಗಳನ್ನೊಳಗೊಂಡ ಮುದ್ರಿತ ಟೆಂಡರ್ ಪುಸ್ತಕಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ ಇವರಿಂದ ಕಚೇರಿ ವೇಳೆಯಲ್ಲಿ ಲಿಖಿತ ಅರ್ಜಿ ಸಲ್ಲಿಸಿ, ಗುತ್ತಿಗೆದಾರರೆಂದು ನೋಂದಾಯಿಸಿದ ಬಗೆಗಿನ ಪ್ರಮಾಣ ಪತ್ರದ ಪ್ರತಿ ಹಾಗೂ ನಿಗದಿತ ಶುಲ್ಕವನ್ನು ಸಂದಾಯ ಮಾಡಿ ಖರೀದಿಸಬಹುದು.

4) ಖಾಲಿ ಟೆಂಡರ್ ಪುಸ್ತಕಗಳಿಗಾಗಿ ಅರ್ಜಿಯನ್ನು ಅಂಚೆ ಮೂಲಕ ಸಲ್ಲಿಸುವವರು ನಿಗದಿತ ಶುಲ್ಕವನ್ನು ರಾಷ್ಟ್ರೀಕೃತ/ಶೆಡ್ಯೂಲ್ಡ್ ಭಾರತೀಯ ಬ್ಯಾಂಕಿನಿಂದ ಪಡೆದ ಡಿ.ಡಿ.ಮುಖಾಂತರ ಗುತ್ತಿಗೆದಾರರೆಂದು ನೋಂದಾಯಿಸಿದ ಬಗೆಗಿನ ಪ್ರಮಾಣ ಪತ್ರದ ಪ್ರತಿಯೊಂದಿಗೆ ಸಲ್ಲಿಸಬಹುದಾಗಿದೆ. ಟೆಂಡರ್ ಪುಸ್ತಕಗಳನ್ನು ಅಂಚೆ ಮೂಲಕ ಪಡೆಯಲಿಚ್ಚಿಸುವ ಗುತ್ತಿಗೆದಾರರು ಅರ್ಜಿಯ ಜೊತೆಗೆ ಸ್ವವಿಳಾಸವಿರುವ 350 ಎಂಎಂ X 245 ಎಂ.ಎಂ. ಅಳತೆಗೂ ಕಡಿಮೆ ಇಲ್ಲದ ರೂ.300.00ಗಳ ಅಂಚೆ ಚೀಟಿ ಅಂಟಿಸಿದ ಲಕೋಟೆಯನ್ನು ಸಲ್ಲಿಸಬೇಕು. ಅಂಚೆಯಲ್ಲಿ ಅಥವಾ

ಕೊರಿಯರ್‌ನಲ್ಲಿ ಯಾವುದೇ ತರಹದ ವಿಳಂಬವಾದಲ್ಲಿ ಅದಕ್ಕೆ ಈ ಕಚೇರಿಯು ಜವಾಬ್ದಾರಿಯಲ್ಲವೆಂದು ತಿಳಿಯಪಡಿಸಲಾಗಿದೆ.

5) ಟೆಂಡರ್ ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ತಾವು ಖರೀದಿಸಲು ಇಚ್ಛಿಸಿದ ಕಾಮಗಾರಿಗಳ ಟೆಂಡರ್ ಪುಸ್ತಕದ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ/ಡಬ್ಲ್ಯೂ–4ರಲ್ಲಿನ ಅಂಶಗಳಿಗೆ ಬದ್ಧರಾಗಿರಬೇಕೆಂದು, ಟೆಂಡರ್‌ಗಿಟ್ಟ ಮೊತ್ತ, ಟೆಂಡರ್ ವ್ಯಾಲಿಡಿಟಿ, ಟೆಂಡರ್ ಸಲ್ಲಿಸಲು ಗುತ್ತಿಗೆದಾರರು ಪಾಲಿಸಬೇಕಾದ ನಿಯಮಗಳು, ತಿದ್ದುಪಡಿಗಳ ಸರಿಪಡಿಸುವಿಕೆ, ವ್ಯತ್ಯಾಸಗಳು, ಗುತ್ತಿಗೆದಾರರು ಸಲ್ಲಿಸಬೇಕಾದ ಠೇವಣಿ ಮೊತ್ತ, ಸೆಕ್ಯೂರಿಟಿ ಠೇವಣಿ ಮೊತ್ತ ಇತ್ಯಾದಿ ವಿವರಗಳು ಲಭ್ಯವಿರುತ್ತವೆ.

6) ಇನ್ನುಳಿದ ಎಲ್ಲ ವಿವರಗಳನ್ನು ಕಚೇರಿಯ ವೇಳೆಯಲ್ಲಿ ಈ ಕಚೇರಿಯಲ್ಲಿ ಹಾಗೂ ಪೂರ್ವ ಟೆಂಡರ್ ಸಭೆಯಲ್ಲಿ ಪಡೆಯಬಹುದು ಕೆಳಗೆ ನಮೂದಿಸಿದ ದಿನಾಂಕಗಳಲ್ಲಿ ಯಾವುದಾದರೂ ರಜಾ ದಿನವಾಗಿದ್ದಲ್ಲಿ ಮುಂದಿನ ಕಚೇರಿಯ ಕಾರ್ಯನಿರ್ವಹಿಸುವ ದಿನಾಂಕವನ್ನು ಕಡೆಯ ದಿನವೆಂದು ಪರಿಗಣಿಸುವುದು.

7) ಭರ್ತಿ ಮಾಡಿದ ಮೊಹರ್ ಬಂದ ಟೆಂಡರ್‌ಗಳನ್ನು ಮುಖ್ಯ ಇಂಜಿನೀಯರರು, ಸಣ್ಣ ನೀರಾವರಿ (ಉ)ವಲಯ ಬಿಜಾಪೂರ, ಅಧೀಕ್ಷಕ ಇಂಜಿನೀಯರ್ ಸಣ್ಣ ನೀರಾವರಿ ವೃತ್ತ, ಬೆಳಗಾವಿ ಹಾಗೂ ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ವಿಭಾಗ ಬೆಳಗಾವಿ ಇವರ ಕಚೇರಿಗಳಲ್ಲಿ ಇರಿಸಿದ ಮೊಹರ್ ಮಾಡಿದ ಟೆಂಡರ್ ಪೆಟ್ಟಿಗೆಯಲ್ಲಿ ನಿಗದಿತ ಸಮಯದಲ್ಲಿ ಸ್ವೀಕರಿಸಲಾಗುವುದು.

8) ಇನ್ನುಳಿದ ವಿವರಗಳನ್ನು ಹಾಗೂ ನಿಯಮಗಳನ್ನು ಮಾದರಿ ಗುತ್ತಿಗೆ ದಾಖಲೆ (ಕೆ/ಡಬ್ಲ್ಯೂ–4)ದಲ್ಲಿ ವಿವರಿಸಲಾಗಿದ್ದು ಗುತ್ತಿಗೆದಾರರು ನಿಯಮಾವಳಿಗಳನ್ನು ಸಂಪೂರ್ಣ ಅಭ್ಯಸಿಸಿ ಅರ್ಥೈಸಿಕೊಳ್ಳಲು ಸೂಚಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಡಗಂಟು ಮೊತ್ತ (ರೂ. ಗಳಲ್ಲಿ)	ಟೆಂಡರ ಫಾರಂ ಬೆಲೆ ರೂ.+ತೆರಿಗೆ ಪ್ರತ್ಯೇಕ ಹಿಂದಿರುಗಿ ಸಲಾಗದು	ಕೆಲಸವನ್ನು ಮುಗಿಸುವ ಕಾಲಮಿತಿ ಮಳೆಗಾಲ ಸೇರಿ
1	2	3	4	5	6
1	ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಬೆಂಡವಾಡ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ	289.42	4,34,200/–	25000+ ತೆರಿಗೆ	18 ತಿಂಗಳು (ಮಳೆಗಾಲ ಸೇರಿ)

ಮೇಲಿನ ಕಾಮಗಾರಿಗಳಿಗೆ ಈ ಕೆಳಗಿನಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

1) ಖಾಲಿ ಟೆಂಡರ್ ಪುಸ್ತಕಗಳಿಗಾಗಿ ಅರ್ಜಿ ಸಲ್ಲಿಸಿ ಖಾಲಿ ಟೆಂಡರ್ ಪುಸ್ತಕಗಳನ್ನು ಈ ಕಛೇರಿಯಲ್ಲಿ ಪಡೆಯುವ ದಿನಾಂಕಗಳು (ಕಚೇರಿ ವೇಳೆಯಲ್ಲಿ) : 07/12/2009 ರಿಂದ 10/12/2009 (ಸದರಿ ಕಾಮಗಾರಿಗಳಿಗಾಗಿ ಅವಶ್ಯವಿರುವ ಈ ಕೆಳಗಿನ ಷರತ್ತುಗಳಲ್ಲಿನ ಕ್ರಮ ಸಂಖ್ಯೆ 10(I) ಯಂತ್ರೋಪಕರಣಗಳನ್ನು ಸ್ವತಃ ಅಥವಾ ಲೀಜ್ ಮೇಲೆ ಹೊಂದಿರುವ, ಲೀಜ್ ಆಗಿದ್ದಲ್ಲಿ ಜಿ.ಪಿ.ಎ.ಮೂಲ ದಾಖಲಾತಿ ಒದಗಿಸುವುದು, ಹಾಗೂ ಶೇಕಡಾ 50ರಷ್ಟು ವಾಹನಗಳ ಸ್ವಂತ ಮಾಲಿಕತ್ವ ಹೊಂದಿರುವ ವಿವರಗಳನ್ನು ಅರ್ಜಿಯ ಜೊತೆಗೆ ಲಗತ್ತಿಸಿ ಅರ್ಜಿಯನ್ನು ಸಲ್ಲಿಸುವುದು.

2) ಪೂರ್ವ ಟೆಂಡರ್ ಸಭೆಯ ದಿನಾಂಕ 15–12–09 (ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ. ಇವರ ಕಛೇರಿಯಲ್ಲಿ ಮುಂ 11.00 ಘಂಟೆ)

- ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ದಿನಾಂಕ : 23/12/2009 ಸಂಜೆ 16.00 ಘಂಟೆಯೊಳಗಾಗಿ
- ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ :24/12/2009 ಸಂಜೆ 16.00 ಘಂಟೆ.(ಸಾಧ್ಯವಾದಲ್ಲಿ)
- ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : ತದನಂತರ ತಿಳಿಸಲಾಗುವುದು.

9) ಷರತ್ತುಗಳು

1) ಟೆಂಡರ್ ಖಾಲಿ ಪುಸ್ತಕಗಳನ್ನು ಪಡೆಯಲು ಇಚ್ಛಿಸುವ ಗುತ್ತಿಗೆದಾರರು ಅರ್ಜಿಯ ಜೊತೆ ನೋಂದಾಯಿತ ಪ್ರಮಾಣ ಪತದ್ರ ಪ್ರತಿಯನ್ನು ಲಗತ್ತಿಸಬೇಕು.

2) ಅಗತ್ಯವಾದ ಮುಂಗಡ ಠೇವಣಿಯನ್ನು (ಇ.ಎಮ್.ಡಿ)ನಗದು ಅಥವಾ ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ. ಇವರ ಹೆಸರಿಗೆ ಬೆಳಗಾವಿಯಲ್ಲಿ ನಗದೀಕರಣಗೊಳಿಸಬಹುದಾದ ಬ್ಯಾಂಕರ್

ಚೆಕ್/ಡಿಡಿ/ಪೇ–ಆರ್ಡರ್/ ರೂಪದಲ್ಲಿ ಅಥವಾ ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ ಇವರ ಹೆಸರಿಗೆ ಪ್ಲೆಡ್ಜ್ ಮಾಡಿದ ಸಣ್ಣ ಉಳಿತಾಯದ ಪತ್ರಗಳನ್ನು ಸಲ್ಲಿಸಬೇಕು.

3) ಖಾಲಿ ಟೆಂಡರ್ ಪುಸ್ತಕಗಳನ್ನು ಪಡೆಯಲು ತಮ್ಮ ಮೂಲ ನೋಂದಣಿ ಪುಸ್ತಕ ತರುವುದು.

4) ಇ.ಎಮ್.ಡಿ ಮಾನ್ಯತೆಯು ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕದಿಂದ 135 ದಿನಗಳ ಅವಧಿಗೆ ಹೊಂದಿರಬೇಕು.

5) ಯಶಸ್ವಿ ಗುತ್ತಿಗೆದಾರರು ಭದ್ರತಾ ಠೇವಣಿ ಮೊತ್ತವನ್ನು ಟೆಂಡರ್ ಒಪ್ಪಂದ ಮಾಡಿಕೊಳ್ಳುವ ಪೂರ್ವದಲ್ಲಿ 5% ರಷ್ಟು ಭರಣಾ ಮಾಡಬೇಕು. (ಅಂಗೀಕರಿಸಲ್ಪಟ್ಟ ಮೊತ್ತಕ್ಕೆ)

6) ಖಾಲಿ ಟೆಂಡರ್ ಪುಸ್ತಕಗಳಿಗೆ ಅರ್ಜಿ ಸಲ್ಲಿಸುವ ಗುತ್ತಿಗೆದಾರರು ಕೆ/ಡಬ್ಲ್ಯೂ–4 ಸಕ್ಷಮ–3ರಂತೆ ಅರ್ಹತೆಹೊಂದುವುದು ಅವಶ್ಯವಾಗಿದೆ. ಅರ್ಜಿಯಜೊತೆಗೆ

ಮುಖ್ಯವಾಗಿ ಹಾಗೂ ಮಹತ್ವವಾಗಿರುವ ಈ ಕೆಳಕಂಡ ಯಂತ್ರೋಪಕರಣಗಳನ್ನು ಸ್ವತ: ಅಥವಾ ಲೀಜ್ ಮೇಲೆ ಹೊಂದಿರಬೇಕು. ಲೀಜ್ ಆಗಿದ್ದಲ್ಲಿ ಜಿ.ಪಿ.ಎ.ಮೂಲ ದಾಖಲಾತಿ ಒದಗಿಸುವುದು ಶೇಕಡಾ 50ರಷ್ಟು ವಾಹನಗಳ ಸ್ವಂತ ಮಾಲಿಕತ್ವ ಹೊಂದಿರಬೇಕು.

- ಎಕ್ಸ್‌ಕವೇಟರ್ =1 ಸಂಖ್ಯೆ.
- ಲಾರಿಗಳು /ಟಿಪ್ಪರ್‌ಗಳು =2 ಸಂಖ್ಯೆ
- ಕಾಂಕ್ರೀಟ್ ಮಿಕ್ಸರ್ ಹಾಪರ್‌ನೊಂದಿಗೆ =1 ಸಂಖ್ಯೆ
- ವೈಬ್ರೇಟರ್ (ಪಿನ್/ಟೇಬಲ್) =2 ಸಂಖ್ಯೆ
- ನೀರು ಎತ್ತುವ ಪಂಪ್ =2 ಸಂಖ್ಯೆ
- ಕ್ರೇನ್ (ಪೈಪ್ ಲೇಯಿಂಗ್‌ಗಾಗಿ) =1 ಸಂಖ್ಯೆ

10) ತಾಂತ್ರಿಕ ಬಿಡ್‌ನಲ್ಲಿ ತಿಳಿಸಲಾದ ಎಲ್ಲಾ ವಿವರಗಳಿಗೆ ಸೂಕ್ತ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರಗಳಿಗೆ ನೋಟರಿ ಅಥವಾ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿರಬೇಕು.(ಕಾರ್ಯನಿರ್ವಾಹಕ ಇಂಜನೀಯರ್‌ರವರಿಗಿಂತ ಕಡಿಮೆ ಅಲ್ಲದ)

11) ಯಾವುದೇ ಗುತ್ತಿಗೆದಾರರು ಸತತ ಮೂರು ಬಾರಿ ಖಾಲಿ ಬುಕ್‌ಲೆಟ್‌ಗಳನ್ನು ಪಡೆದು, ಟೆಂಡರ್‌ಗಳನ್ನು ಸಲ್ಲಿಸದೆ ಇದ್ದಲ್ಲಿ ಅಂತಹ ಗುತ್ತಿಗೆದಾರರ ಅರ್ಜಿ ಸ್ವೀಕರಿಸಲಾಗುವುದಿಲ್ಲ ಹಾಗೂ ಖಾಲಿ ಟೆಂಡರ್ ಪುಸ್ತಕ ವಿತರಿಸುವುದಿಲ್ಲ.

12) ಯಾವುದೇ ಕಾರಣ ನೀಡದೆ ಯಾವುದೇ ಅಥವಾ ಎಲ್ಲ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕು ಸಕ್ಷಮ ಪ್ರಾಧಿಕಾರ ಹೊಂದಿರುತ್ತದೆ.

13) ಷರತ್ತಿನ ಟೆಂಡರ್‌ಗಳನ್ನು ಪರಿಗಣಿಸುವುದಿಲ್ಲ.

ವ್ಹಿ.ಬಿ. ಕುಲಕರ್ಣಿ

ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ.

Water Resources Department (Minor Irrigation)

Office of the Executive Engineer, M.I. Division, Belgaum

No.EE/MID/BGM/AE/TND/2009- 10/3384, Dated: 10th October 2009

Tender Invitation (Two cover system)

(Standard Tender Document K/W 4)

1. The Executive Engineer, Minor Irrigation Division, Belgaum invites item rate tender from eligible tenderers Registered in KPWD for the works below in two cover system in duplicate as per the Karnataka transparency in Public Procurement Ordinance act 2000 & standard Tender document. The tenders are advised to note the minimum qualification criteria specified in K/W-4 clause (3) of the Instructions to tenderers to qualify for award of the contract.
2. Two cover bid system of tenders consist of cover-I i.e., Technical Bid & cover-II Financial Bid, Technical Bid opened first, and eligibility of tenderers evaluated on the criteria prescribed then, The Financial Bid of eligible tenderers only will be opened and evaluated. The decision of the competent authority is the final in this regard.

3. Printed contract documents relating to work consisting of the complete set of drawings, specifications of the work to be done, the schedule of quantities, set of conditions of contract to be complied which can be purchased from the office of the Executive Engineer, Minor Irrigation Division, Belgaum by submitting the written application along with a Photostat copy of registration certificate, within office hours on all working days on or before the due date along with cost of tender document.
4. The applicant who wish to get the Blank tender document by post shall submit self addressed 350 mm x 245 mm sized envelope along with Rs.300/- Indian postage stamps. Any delay in transit will be at the risk of the applicant.
5. The intending contractors are requested to note that, they should abide by the details instructions & conditions contained in the standard Tender document K/W-4 purchased by them, particulars regarding the amount and validity period of Earnest Money Deposit, Tender validity period, procedure to be followed by the contractor in submitting the tender & in completing the tender documents, correction paras discrepancies, Security Deposit, payable by the successful tender etc., are also available in Tender document.
6. Further information & clarification may be obtained from this office during office hours, if the office happens to be closed on the date as specified next working day will be considered and during the pre-tender meeting.
7. The sealed completed tenders will be received in the Office of the Chief Engineer, M.I.(N) Zone Bijapur, Superintending Engineer, M.I.Circle, Belgaum & Executive Engineer, Minor Irrigation Division, Belgaum on the prescribed date & time.
8. Other details can be seen in the Standard Tender Documents (K/W-4) .

Sl. No	Name of work	Approximate value of work (Rs. In lakhs)	Earnest Money Deposit (Rs.)	Cost of document (Rs.)	Period of completion (including monsoon)
1	2	3	4	5	6
1	Construction of Lift Irrigation Scheme Near BENDWAD Village Tq. Raibag. Dist: Belgaum	289.42	4,34,200/-	25000.00+ Tax	18 months (including monsoon)

1. Date of Sale of Tender documents On Application (During Office hours):
   From : 07/12/2009 to 10/12/2009
   (Each Tenderer further demonstrate as given in conditions Sl.No.8(iv) : (a) availability by owning at least 50% of the required/ specified key and critical equipment for this work and (b) the remaining 50% can be deployed on lease/ hire basis for all works provided, the relevant documents (commitment, agreements etc.) for availability for this work are to be furnished with the Tender application) failing which such applications will not be accepted.
2. Date of Pre-tender meeting : 15-12-09 (In the office of the Executive Engineer, M.I. Division, Belgaum) at 11.00 AM
3. Date of receipt of tender document Dt : 23/12/2009 (Up to 16-00 hrs)
4. Date of opening of Technical Bid: Dt.24-12-2009 at 16.00 hrs (if possible)
5. Date of opening of Financial Bid : Shall be Intimated later.

9. Conditions

1) The contractor while applying for blank tender forms should submit contractor Registration certificate copy.
2) The earnest money deposit shall be in favour of Executive Engineer, M.I. Division, Belgaum and may be in the form of Banker's cheque/DD/Pay order/ payable at Belgaum or Cash or Specified small savings instruments pledged to Executive Engineer, M.I.Division, Belgaum.
3) The contractor should produce Original Registration pass book while receiving blank tender forms.
4) The validity of EMD shall be for a period 135 days from the last date of receipt of the tender.
5) Security deposit should be paid 5% before Agreement (For approved tender amount)

10. The applicant should have the Eligibility criteria as per section-3 of KW-4 & Note that

i) Each Tenderer should demonstrate: (a) availability by owning at least 50% of the required/ specified key and critical equipment for this work and (b) the remaining 50% can be deployed on lease/ hire basis for all works provided, the relevant documents (commitment, agreements etc.) for availability for this work are furnished.(to be furnished along with the Application Form)

❖	Excavator	1 No.
❖	Lorry/Tipper	2 Nos.
❖	C.C.Mixer with Hopper	1 No.
❖	Vibrator	2 Nos.
❖	Dewatering pump	2 Nos.
❖	Crane for Pipe Laying	1 No.

11. All the documents enclosed in support of Technical bid shall be attested by Notary or Gazetted officer. (Not below the rank of Executive Engineer,)
12. Application will not be accepted/ Tender forms will not issued to the contractor who have not participated in the tender after purchase of tender documents continuously for 3 times.
13. The right to accept or reject any or all the tenders without assigning any reasons rates is with the competent authority
14. Conditional tenders will not be considered.

V.B. KULKARNI

Executive Engineer, M.I.Division, Belgaum.

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ವಿಭಾಗ, ಶಿವಮೊಗ್ಗ

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ) (ಸ್ಟ್ಯಾಂಡರ್ಡ್ ಟೆಂಡರ್ ಪದ್ಧತಿ)

ಮರು ಟೆಂಡರ್ 3ನೇ ಕರೆ K/W-4

ಟೆಂಡರ್ ಪ್ರಕಟಣೆ ಸಂಖ್ಯೆ:03/09–10, ದಿನಾಂಕ: 1ನೇ ಅಕ್ಟೋಬರ್ 2009

ಕರ್ನಾಟಕ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಈ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಬಿಡುಗಡೆಯಾಗುವ ದಿನಾಂಕ: 02.11.2009 ರಿಂದ 04.11.2009. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ http://eproc.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಮಾಹಿತಿ ಪಡೆಯಬಹುದು.

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಅನ್ನು ದಿ:11.11.2009 ಸಂಜೆ 4.00 ಗಂಟೆಯ ಒಳಗೆ ಸಲ್ಲಿಸಬೇಕು.

ಪ್ರೀ ಟೆಂಡರ್ ಸಭೆಯನ್ನು ದಿ: 06.11.2009 ಸಂಜೆ 3.00 ಗಂಟೆಗೆ ಈ ಕಛೇರಿಯಲ್ಲಿ ಏನಾದರೂ ವಿಚಾರಣೆಗಳಿದ್ದರೆ ಕೇಳಬಹುದು. ಅವಧಿಗೆ ಹೊಂದಿರಬೇಕು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ (ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ)	ಕಾಲಮಿತಿ ಮಳೆಗಾಲ ಸೇರಿ
1	ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾ॥ ತುಂಗಾ ನದಿಯಿಂದ ಮಹಿಷಿ ಮತ್ತು ಹೆದ್ದೂರು ಗ್ರಾಮಗಳಿಗೆ ಏತ ನೀರಾವರಿ ಯೋಜನೆ	147.40	2,21,200/–	15 ತಿಂಗಳು

ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಶಿವಮೊಗ್ಗ ಇವರ ಕಛೇರಿಯನ್ನು, ಕಛೇರಿ ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಬಿ.ಹೆಚ್. ಯೋಗೇಶ್

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಶಿವಮೊಗ್ಗ

Office of the Executive Engineer, M.I. Division, Shimoga

SECTION 1: INVITATION FOR TENDERS (IFT) (RE-TENDER) (III Call)

SHORT TERM TENDER NOTIFICATION

No: EE/MID/SMG/AE-1/TND/LIS/2009-10/ Dated: 1st October 2009

IFT No: 03/09-10 K/W-4

1. Tenders are invited from eligible Contractors for the following work through e-procurement portal to the Government of Karnataka (viz http://eproc.karnataka.gov.in) Tender documents may be downloaded from the e-procurement portal of the Government of Karnataka. Tenders must be submitted online through e-procurement portal and the opening of the tenders will be as per the e-procurement portal guidelines. Further details can be had from the Executive Engineer, M.I. Division, Shimoga.
2. Tender documents may be downloaded from the e-procurement portal of the Government of Karnataka from 02.11.2009 to 04.11.2009.
3. Tenders must be accompanied by earnest money deposit specified for the work in the Table below. Earnest money deposit will have to be in any one of the forms as specified in the Tender document and shall have to be valid for 45 days beyond the validity of the tender.
4. Tenders must be delivered to The Executive Engineer, Minor Irrigation Division, Shimoga on or before 16 hours on 11.11.2009 (date) and First Cover tenders will be opened if possible on the same day at 17 hours in the presence of the Tenderers who wish to attend. If the office happens to be closed on the date of receipt of the tenders as specified, the tenders will be received and opened on the next working day at the same time and venue.
5. A Pre-tender meeting will be held on 06.11.2009 at 15 hours at the office of the Executive Engineer, M.I. Division, Shimoga to clarify the issues if any, and to answer questions on any matter that may be raised at that stage as stated in Clause 8.2 of 'Instructions to Tenderers' of the tender document.

Package No.	Name of Work	Approximate value of work (Rs. in lakh)	Earnest Money Deposit (Rs.)	Period of completion
1	Providing Lift Irrigation Scheme from Tunga River near Mahishi & Heddur in Thirthahalli Taluk Shimoga District.	147.40	2,21,200/-	15 Months

For any other information the Executive Engineer, M.I. Division, Shimoga may be contacted at office hours.

P.R. 930 Executive Engineer, M.I. Division, Shimoga.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿ, ಬೆಳಗಾವಿ

ಅಧಿಸೂಚನೆ ಸಂಖ್ಯೆ: ಬೆಜಿನ್ಯಾ/ಆಡಳಿತ/ನೇಮಕಾತಿ/1/2009, ದಿನಾಂಕ: 20ನೇ ಅಕ್ಟೋಬರ್ 2009

ವಿಷಯ: ಶೀಘ್ರಲಿಪಿಗಾರರ/ಬೆರಳಚ್ಚುಗಾರರ/ಬೆರಳಚ್ಚು ನಕಲುಗಾರರ/ಆದೇಶ ಜಾರಿಕಾರರ/ಸಿಪಾಯಿ ಹುದ್ದೆಗಳ ನೇಮಕಾತಿಯ ಬಗ್ಗೆ.

ಉಲ್ಲೇಖ: 1) ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆ: LCA-II 205/2004 ದಿನಾಂಕ 17–06–2009
2) ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆ: LCA-II 244/2009 ದಿನಾಂಕ 08–09–2009
3) ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆ: LCA-I 220/1996(uniform staff pattern) ದಿನಾಂಕ:15.09.2009

ಮೇಲ್ಕಂಡ ಅಧಿಸೂಚನೆಯನ್ವಯ ಬೆಳಗಾಂವ ಜಿಲ್ಲಾ ನ್ಯಾಯಾಂಗ ಘಟಕದಲ್ಲಿ ಖಾಲಿ ಇರುವ ಶೀಘ್ರಲಿಪಿಗಾರರ/ಬೆರಳಚ್ಚುಗಾರರ/ಬೆರಳಚ್ಚು ನಕಲುಗಾರರ/ಆದೇಶ ಜಾರಿಕಾರರ/ಸಿಪಾಯಿ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ನಿಗದಿಪಡಿಸಿದ ಅರ್ಜಿ ನಮೂನೆ ಬೆರಳಚ್ಚು/ಗಣಕೀಕೃತ ಪ್ರತಿಯಲ್ಲಿ ಅಭ್ಯರ್ಥಿಗಳು ತಮ್ಮ ಸ್ವಂತ ಕೈಬರಹದಿಂದ ಎಲ್ಲ ಅಂಕಣಗಳನ್ನು ಜಾಗರೂಕತೆಯಿಂದ ಭರ್ತಿಮಾಡಿ ದಿನಾಂಕ: **20/11/2009** ರಂದು **ಸಂಜೆ 5–00** ಗಂಟೆಯ ಒಳಗೆ ಸಲ್ಲಿಸತಕ್ಕದ್ದು.

ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20/11/2009 ಸಂಜೆ 5–00 ಗಂಟೆ.

ಅರ್ಜಿ ಸಲ್ಲಿಸಬೇಕಾದ ವಿಳಾಸ: ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾಂವ ಜಿಲ್ಲೆ, ಬೆಳಗಾಂವ

I ಶೀಘ್ರಲಿಪಿಗಾರರು (Stenographers)

i) ಹುದ್ದೆಗಳ ಸಂಖ್ಯೆ : 11

ii) ವೇತನ ಶ್ರೇಣಿ: ರೂ.7,275–175–7800–200–8600–225–9500–250–10500–300–12300–350–13350 ಹಾಗೂ 110 ರೂ. ವಿಶೇಷ ವೇತನ ನೀಡಲಾಗುವುದು.

iii) ಹುದ್ದೆಗಳ ವರ್ಗೀಕರಣ:

	GM	GM Ex.Service-man	GM PH Hearing Impaired	IIA	IIIA	IIIB	ST	SC	Total
ಇತರೆ	3	1	1	1	––	––	––	1	7
ಮಹಿಳಾ ಅಭ್ಯರ್ಥಿ	––	––	––	–	1	1	1	1	4
ಒಟ್ಟು	**3**	**1**	**1**	**1**	**1**	**1**	**1**	**2**	**11**

ಶೈಕ್ಷಣಿಕ ವಿದ್ಯಾರ್ಹತೆ:

1) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.
2) ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆಸುವ ಕನ್ನಡ ಹಾಗೂ ಆಂಗ್ಲ ಭಾಷೆಯ ಶೀಘ್ರಲಿಪಿ ಸೀನಿಯರ್ ಮತ್ತು ಕನ್ನಡ ಹಾಗೂ ಆಂಗ್ಲ ಭಾಷೆಯ ಬೆರಳಚ್ಚು ಸೀನಿಯರ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಕರ್ನಾಟಕ ತಾಂತ್ರಿಕ ಪರೀಕ್ಷಾ ಮಂಡಳಿಯು ನಡೆಸುವ ಸೆಕ್ರೆಟರಿಯಲ್ ಪ್ರಾಕ್ಟೀಸ್ ಪಠ್ಯಕ್ರಮದ ಡಿಪ್ಲೊಮಾ ಪದವಿಯೊಂದಿಗೆ ಕನ್ನಡ ಮತ್ತು ಆಂಗ್ಲ ಭಾಷೆಗಳ ಶೀಘ್ರಲಿಪಿ ಹಾಗೂ ಬೆರಳಚ್ಚು ವಿಷಯಗಳನ್ನು ಐಚ್ಛಿಕ ವಿಷಯವಾಗಿ ಅಭ್ಯಸಿಸಿರಬೇಕು.

ಅರ್ಹತಾ ಪರೀಕ್ಷೆ:

1) ಅಭ್ಯರ್ಥಿಗಳಿಗೆ ಕನ್ನಡ/ಇಂಗ್ಲೀಷ್ ಭಾಷೆಗಳಲ್ಲಿ ಒಂದು ನಿಮಿಷಕ್ಕೆ 120 ಶಬ್ದಗಳಂತೆ 5 ನಿಮಿಷಗಳ ಉಕ್ತಲೇಖನ ನೀಡಿ ಆಮೇಲೆ ಲಿಪ್ಯಂತರ ಮಾಡಲು ಹೇಳಲಾಗುವುದು. ಅದರ ಅವಧಿ 45 ನಿಮಿಷಗಳು

II ಬೆರಳಚ್ಚುಗಾರರು (Typists)

i) ಹುದ್ದೆಗಳ ಸಂಖ್ಯೆ : 9

